


بسم اللهِ الرّحمٰن الرّحيم

# ಹಝ್ರತ್ ಪೈಗಂಬರ್(ಸ)ರ ಸತ್ಯಸಂಧ ದಾಸ ಹಝ್ರತ್ ಮಸೀಹ್ ಮೌಊದ್(ಅ)ರ ದಾನಶೀಲತೆಯ ಕುರಿತಾದ ವಿಶ್ವಾಸವರ್ಧಕ ಪ್ರಸ್ತಾಪ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **03–07–2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಝ್ರತ್ ಮಸೀಹ್ ಮೌಊದ್(ಅ)ರ ವಾತ್ಸಲ್ಯ ಮತ್ತು ದಾನಶೀಲತೆಯ ಕುರಿತಾದ ಕೆಲವು ಘಟನೆಗಳನ್ನು ಪ್ರಸ್ತುತಪಡಿಸುತ್ತೇನೆ.

ಹಝ್ರತ್ ಶೇಖ್ ಯಅ್‌ಖೂಬ್ ಅಲಿ ಇರ್ಫಾನಿ ಸಾಹಿಬ್(ರ) ಬರೆಯುತ್ತಾರೆ: ಹಝ್ರತ್ ಮಸೀಹ್ ಮೌಊದ್(ಅ)ರ ದಾನವು ಒಂದು ವಿಶಾಲವಾದ ನದಿಯಂತೆ ಆಗಿತ್ತು ಮತ್ತು ಅವರ ಕೈಯು ಮುತ್ತುಗಳನ್ನು ಸುರಿಸುವ ಮೋಡದಂತೆ ಆಗಿತ್ತು. ಅದು ಸುರಿಯುತ್ತಲೇ ಇರುತ್ತಿತ್ತು ಮತ್ತು ಎಲ್ಲರನ್ನೂ ತೃಪ್ತಿಗೊಳಿಸುತ್ತಾ ಸಾಗುತ್ತಿತ್ತು. ಈ ದಾನಶೀಲತೆಯು ರಮಝಾನ್ ತಿಂಗಳಲ್ಲಿ ಇನ್ನೂ ಹೆಚ್ಚಾಗುತ್ತಿತ್ತು.

ಅಬ್ದುಲ್ ಗಫ್ಫಾರ್ ಕಾಶ್ಮೀರಿ ಸಾಹಿಬ್ ವಿವರಿಸುತ್ತಾರೆ: ಅವರ ಮದುವೆಯಾದಾಗ ಅವರಿಗೆ ಹಝ್ರತ್ ಮಸೀಹ್ ಮೌಊದ್(ಅ) ಎರಡು ಬೆಲೆಬಾಳುವ ಆಭರಣಗಳನ್ನು ನೀಡಿದರು. ಈ ಘಟನೆಯು ಹಝ್ರತ್ ಮಸೀಹ್ ಮೌಊದ್(ಅ)ರ ಪ್ರವಾದಿತ್ವದ ವಾದಕ್ಕೂ ಮುಂಚಿನದ್ದಾಗಿದೆ, ಆಗ ಅವರು ಏಕಾಂತವಾಸದಲ್ಲೇ ಇದ್ದರು.

ಬಶೀರ್ ಸಾಹಿಬ್ ಭಟ್ಟಿಯವರ ತಾಯಿ ವಿವರಿಸುತ್ತಾರೆ: ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಸಾಹಿಬ್(ರ)ರ ಮದುವೆಯ ಸಂದರ್ಭದಲ್ಲಿ, ಓರ್ವ ಹಾಡುವ ಮಹಿಳೆಯು ಡೋಲು ತೆಗೆದುಕೊಂಡು ಬಂದು ಬಾರಿಸಲು ಪ್ರಾರಂಭಿಸಿದಳು. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: 'ಇದನ್ನು ಬಾರಿಸಬೇಡ ಎಂದು ಅವಳಿಗೆ ಹೇಳಿರಿ ಮತ್ತು ಅವಳು ಏನನ್ನು ಬೇಡುತ್ತಾಳೋ ಅದನ್ನು ಕೊಟ್ಟುಬಿಡಿರಿ.' ಅದರಂತೆ ಅವಳಿಗೆ ನಾಲ್ಕೈದು ರೂಪಾಯಿಗಳನ್ನು ನೀಡಲಾಯಿತು. ಅನಂತರ ಅವಳು ತನಗೆ ಚಳಿಯಾಗುತ್ತಿದೆ ಎಂದು ಹೇಳಿದಳು. ಆಗ ಹಝ್ರತ್ ಮಸೀಹ್ ಮೌಊದ್(ಅ) ಅವಳಿಗೆ ಒಂದು ಹೊದಿಕೆಯನ್ನು ಕೊಟ್ಟರು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ವಿವರಿಸುತ್ತಾರೆ: ಮೊದಲನೆಯದಾಗಿ ಈ ವಿಷಯವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು, ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಯಾವುದೇ ರೀತಿಯ ವಿಶೇಷ ಉಡುಪುಗಳ ಬಗ್ಗೆ ಆಸಕ್ತಿ ಇರಲಿಲ್ಲ. ಕೊನೆಯ ದಿನಗಳ ಕೆಲವು ವರ್ಷಗಳಲ್ಲಿ ಅವರಿಗೆ ಬಹಳಷ್ಟು ಸಿದ್ಧ ಉಡುಪುಗಳು ಬರುತ್ತಿದ್ದವು, ವಿಶೇಷವಾಗಿ ಕೋಟ್ ಇತ್ಯಾದಿ. ಮುಂಡಾಸನ್ನು ಹೆಚ್ಚಾಗಿ ತಾವೇ ಖರೀದಿಸಿ ಕಟ್ಟಿಕೊಳ್ಳುತ್ತಿದ್ದರು. ಬಟ್ಟೆಗಳು ಹೇಗೆ ತಯಾರಾಗುತ್ತಿದ್ದವೋ, ಅದೇ ರೀತಿ ಖರ್ಚೂ ಆಗುತ್ತಿದ್ದವು. ಅಂದರೆ, ಅನುಗ್ರಹದ ಸಂಕೇತವಾಗಿ (ತಬರ್ರುಕಾಗಿ) ಕೇಳುವವರಿಗೆ ನೀಡಲಾಗುತ್ತಿತ್ತು.

ಹಝ್ರತ್ ಮೀರ್ ಮೆಹದಿ ಹುಸೇನ್ ಸಾಹಿಬ್(ರ) ವಿವರಿಸುತ್ತಾರೆ: ಒಮ್ಮೆ ಮೌಲ್ವಿ ಮುಹಮ್ಮದ್ ಅಹ್ಸನ್ ಸಾಹಿಬ್(ರ) ನನ್ನೊಡನೆ 'ಚಶ್ಮೇ ಮಸೀಹಿ' ಎಂಬ ಪುಸ್ತಕದ ಒಂದು ಪ್ರತಿಯನ್ನು ಕೇಳಿದರು. ನಾನು ಹೇಳಿದೆ: ಇಷ್ಟು ಪ್ರತಿಗಳು ಕಚೇರಿಯಲ್ಲಿರಬೇಕು, ಏಕೆಂದರೆ ಕೆಲವೊಮ್ಮೆ ಸರ್ಕಾರವು ಕೇಳುತ್ತದೆ ಎಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳಿದ್ದಾರೆ. ಈಗ ಯಾವುದೇ ಹೆಚ್ಚುವರಿ ಪ್ರತಿ ಇಲ್ಲ. ನೀವು ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಬರೆದು ಕೇಳಬಹುದು. ಅವರು ಬರೆದಾಗ ಅವರಿಗೆ ಹಝ್ರತ್ ಮಸೀಹ್ ಮೌಊದ್(ಅ) ಒಂದು ಪ್ರತಿಯನ್ನು ನೀಡಿದರು.

ಹಝ್ರತ್ ಮುನ್‌ಶಿ ಝ಼ಫರ್ ಅಹ್ಮದ್ ಸಾಹಿಬ್(ರ) ವಿವರಿಸುತ್ತಾರೆ: ಹಝ್ರತ್ ಮಸೀಹ್ ಮೌಊದ್(ಅ)ರ ಬಳಿ ಕಸ್ತೂರಿ ಇರುತ್ತಿತ್ತು. ಒಮ್ಮೆ ನಾನು ಹೇಳಿದೆ: 'ಹುಝ಼ೂರ್, ನನಗೆ ಕಸ್ತೂರಿ ಬೇಕು.' ಹಝ್ರತ್ ಮಸೀಹ್ ಮೌಊದ್(ಅ) ತಕ್ಷಣ ಆ ಡಬ್ಬಿಯನ್ನು ನನ್ನ ಮುಂದಿಟ್ಟು, 'ಇದರಿಂದ ಎಷ್ಟು ಬೇಕೋ ಅಷ್ಟು ತೆಗೆದುಕೊಳ್ಳಿ' ಎಂದರು. ನಾನು ಅದರಿಂದ ಸ್ವಲ್ಪ ತೆಗೆದುಕೊಂಡಾಗ ಹಝ್ರತ್ ಮಸೀಹ್ ಮೌಊದ್(ಅ) ಮುಗುಳ್ನಕ್ಕು ಹೇಳಿದರು: 'ಇದು ಬಹಳ ಕಡಿಮೆ.' ಅನಂತರ ಸುಮಾರು ಒಂದು–ಒಂದೂವರೆ ತೊಲೆಯಷ್ಟು ಕಸ್ತೂರಿಯನ್ನು ಹಝ್ರತ್ ಮಸೀಹ್ ಮೌಊದ್(ಅ) ಸ್ವತಃ ನನಗೆ ನೀಡಿದರು.

ತಮ್ಮ ಸ್ನೇಹಿತರಿಗಾಗಿ ಹಝ್ರತ್ ಮಸೀಹ್ ಮೌಊದ್(ಅ)ರ ಹೃದಯದಲ್ಲಿ ಎಷ್ಟೊಂದು ನೋವಿತ್ತು ಎಂಬುದನ್ನು ವ್ಯಕ್ತಪಡಿಸುವ ಒಂದು ಘಟನೆ ಇದೆ. ಹಝ್ರತ್ ಹಕೀಮ್ ಫಝ್ಲುರ್ರಹ್ಮಾನ್ ಸಾಹಿಬ್(ರ) ವಿವರಿಸುತ್ತಾರೆ: ನನ್ನ ಪತ್ನಿ ಒಂದು ಮಗುವಿಗೆ ಜನ್ಮ ನೀಡಿದಳು. ಏಳನೇ ದಿನ ಮಗ್ರಿಬ್ ಸಮಯದಲ್ಲಿ ಅವಳಿಗೆ ಫಿಟ್ಸ್ ಲಕ್ಷಣಗಳು ಕಾಣಿಸಿಕೊಳ್ಳಲಾರಂಭಿಸಿದವು. ಮಗ್ರಿಬ್ ನಂತರ ನಾನು ಹಝ್ರತ್ ಮಸೀಹ್ ಮೌಊದ್(ಅ)ರ ಬಳಿಗೆ ಓಡೋಡಿ ಹೋದೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: 'ಇದು ಬಹಳ ಅಪಾಯಕಾರಿ ಕಾಯಿಲೆಯ ಮುನ್ಸೂಚನೆಯಾಗಿದೆ. ನಿನ್ನ ಪತ್ನಿಗೆ ಇಂಗು ಕೊಡು ಮತ್ತು ಒಂದೂವರೆ ಗಂಟೆಯ ನಂತರ ನನಗೆ ತಿಳಿಸು.' ನಾನು ಇಶಾ ನಮಾಝಿನ ನಂತರ ಮತ್ತೆ ಹೋದೆ ಮತ್ತು ರೋಗವು ಉಲ್ಬಣಗೊಂಡಿದೆ ಎಂದು ಹೇಳಿದೆ. ಹಝ್ರತ್ ಮಸೀಹ್ ಮೌಊದ್(ಅ) ಬೇರೆ ಬೇರೆ ಔಷಧಿಗಳನ್ನು ಸೂಚಿಸುತ್ತಿದ್ದರು, ಆದರೆ ರೋಗವು ಹೆಚ್ಚಾಗುತ್ತಲೇ ಇತ್ತು. ಕೊನೆಗೆ ಒಂದು ಹಂತದಲ್ಲಿ ರೋಗಿಗೆ ವಾಂತಿಯಾಯಿತು, ಇದು ಈ ಕಾಯಿಲೆಯಲ್ಲಿ ಕೊನೆಯ ಹಂತವಾಗಿರುತ್ತದೆ. ಅನಂತರ ಅವಳಿಗೆ ಉಸಿರಾಟ ಮಾಡಲು ಕಷ್ಟವಾಯಿತು, ಕುತ್ತಿಗೆ ಹಿಂದಕ್ಕೆ ಎಳೆಯಲ್ಪಟ್ಟಿತು, ಕಣ್ಣುಗಳಲ್ಲಿ ಕತ್ತಲು ಆವರಿಸಿತು ಮತ್ತು ನಾಲಿಗೆ ಸ್ತಬ್ಧವಾಯಿತು. ನಾನು ಓಡಿಹೋಗಿ ಮೆಟ್ಟಿಲುಗಳನ್ನು ಹತ್ತಿದೆ. ನನ್ನ ಧ್ವನಿಯನ್ನು ಕೇಳಿ ಹಝ್ರತ್ ಮಸೀಹ್ ಮೌಊದ್(ಅ) ಬಾಗಿಲು ತೆರೆದರು ಮತ್ತು 'ಏನಾಯಿತು? ಎಲ್ಲವೂ ಸರಿಯಾಗಿದೆಯೇ?' ಎಂದು ಕೇಳಿದರು. ನಾನು ಹೇಳಿದೆ: 'ಈಗ ಪರಿಸ್ಥಿತಿ ಬಹಳ ಗಂಭೀರವಾಗಿದೆ.' ಹಝ್ರತ್ ಮಸೀಹ್ ಮೌಊದ್(ಅ) ಎಲ್ಲ ವಿವರಗಳನ್ನು ಕೇಳಿದ ನಂತರ ಹೀಗೆ ಹೇಳಿದರು: 'ಲೌಕಿಕವಾದ ಎಲ್ಲ ಆಯುಧಗಳನ್ನು (ಔಷಧಿಗಳು) ನಾವು ಪ್ರಯೋಗಿಸಿದ್ದೇವೆ. ಈಗ ದುಆ ಎಂಬ  ಒಂದು ಆಯುಧ ಮಾತ್ರ ಉಳಿದಿದೆ. ನೀನು ಹೋಗು, ಇನ್ನು ಅವಳಿಗೆ ಗುಣಮುಖವಾಗುವಾಗಲೇ ನಾನು ಪ್ರಾರ್ಥನೆ ಮಾಡಿ ತಲೆ ಎತ್ತುವೆನು.

ಇದನ್ನು ಕೇಳಿ ನಾನು ಮರಳಿ ಬಂದೆ ಮತ್ತು ಪತ್ನಿಗೆ ಹೇಳಿದೆ: 'ಈಗ ನಿನಗೆ ಚಿಂತೆ ಏಕೆ? ಈಗಂತೂ ಗುತ್ತಿಗೆದಾರನೇ ಸ್ವತಃ ಗುತ್ತಿಗೆಯನ್ನು ತೆಗೆದುಕೊಂಡಿದ್ದಾನೆ.' ರಾತ್ರಿ ಎರಡು ಗಂಟೆಯಾಗಿತ್ತು. ನಾನು ಮನೆಗೆ ಬಂದು ರೋಗಿಯನ್ನು ಅದೇ ಸ್ಥಿತಿಯಲ್ಲಿ ಬಿಟ್ಟು ಬೇರೆ ಕೋಣೆಗೆ ಹೋಗಿ ಮಲಗಿದೆ. ಮುಂಜಾನೆ ಪಾತ್ರೆಯೊಂದರ ಸದ್ದು ಕೇಳಿ ನನಗೆ ಎಚ್ಚರವಾಯಿತು. ನೋಡಿದರೆ ಪತ್ನಿ ಗುಣಮುಖಳಾಗಿದ್ದಳು. ಅವಳು ಹೇಳಿದಳು: 'ನೀವು ಮಲಗಿ ಇದ್ದಿರಿ. ಎರಡು ಗಂಟೆಗಳ ನಂತರ ಅಲ್ಲಾಹನು ನನ್ನ ಮೇಲೆ ಕರುಣೆ ತೋರಿದನು.'

ಈ ಘಟನೆಯಿಂದ ಹಝ್ರತ್ ಮಸೀಹ್ ಮೌಊದ್(ಅ)ರಿಗೆ ತನ್ನ ಸ್ನೇಹಿತರೊಂದಿಗೆ ಇದ್ದ ನೋವು ಮತ್ತು ಔದಾರ್ಯದ ಉನ್ನತ ಗುಣಮಟ್ಟಗಳ ಅರಿವಾಗುತ್ತದೆ.

ಒಮ್ಮೆ ಖಾದಿಯಾನಿನ ಒಬ್ಬ ಕಡುವಿರೋಧಿಗೆ ತನ್ನೊಬ್ಬ ಸಂಬಂಧಿಗಾಗಿ ಕಸ್ತೂರಿಯ ಅಗತ್ಯಬಿತ್ತು. ಆ ಸಮಯದಲ್ಲಿ ಕಸ್ತೂರಿ ಸಿಗುತ್ತಿರಲಿಲ್ಲ ಎಂದು ಮಾತ್ರವಲ್ಲ, ಅದು ಬಹಳ ಬೆಲೆಬಾಳುವ ವಸ್ತುವೂ ಆಗಿತ್ತು. ಅವನು ಹಝ್ರತ್ ಮಸೀಹ್ ಮೌಊದ್(ಅ)ರ ಬಳಿಗೆ ಬಂದು ಕಸ್ತೂರಿಗಾಗಿ ಬೇಡಿದನು. ಹಝ್ರತ್ ಮಸೀಹ್ ಮೌಊದ್(ಅ) ತಕ್ಷಣವೇ ಅರ್ಧ ತೊಲೆಯಷ್ಟು ಕಸ್ತೂರಿಯನ್ನು ಅವನಿಗೆ ನೀಡಿದರು.

ಪ್ಲೇಗ್ ಮಹಾಮಾರಿ ಹರಡಿದಾಗ ಹಝ್ರತ್ ಮಸೀಹ್ ಮೌಊದ್(ಅ) ಅಲ್ಲಾಹನ ದಿವ್ಯವಾಣಿ ಮತ್ತು ಜ್ಞಾನದ ಆಧಾರದಲ್ಲಿ ಒಂದು ಔಷಧಿಯನ್ನು ತಯಾರಿಸಲು ಪ್ರಾರಂಭಿಸಿದರು. ಅದಕ್ಕೆ **'ತಿರ್‌ಯಾಖೆ ಇಲಾಹಿ'** ಎಂದು ಹೆಸರಿಟ್ಟರು. ಈ ಔಷಧಿಯಲ್ಲಿ ಸಾವಿರಾರು ರೂಪಾಯಿಗಳ ಮುತ್ತುರತ್ನಗಳ ಮಿಶ್ರಣವಿತ್ತು, ಅನೇಕ ಬೆಲೆಬಾಳುವ ಔಷಧಿಗಳನ್ನು ಸೇರಿಸಲಾಗಿತ್ತು. ಈ ಔಷಧಿ ತಯಾರಾದಾಗ ಹಝ್ರತ್ ಮಸೀಹ್ ಮೌಊದ್(ಅ) ಅತ್ಯಂತ ಉದಾರತೆಯಿಂದ ಅದನ್ನು ಹಂಚಿದರು. ಹೊರಗಿನಿಂದ ಬೇಡುವವರಿಗೂ ತಮ್ಮ ಸ್ವಂತ ಖರ್ಚಿನಲ್ಲಿ ರಿಜಿಸ್ಟರ್ಡ್ ಪಾರ್ಸಲ್ ಮೂಲಕ ಕಳುಹಿಸುತ್ತಿದ್ದರು.

ಹಝ್ರತ್ ಮುಫ್ತಿ ಮುಹಮ್ಮದ್ ಸಾದಿಕ್ ಸಾಹಿಬ್(ರ) ತಮ್ಮ ಪತ್ರವೊಂದರಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರೊಡನೆ ಹೀಗೆ ಹೇಳಿದರು: 'ಪತ್ನಿಯು ಗರ್ಭಿಣಿಯಾಗಿರುವ ಕಾರಣ ಮನೆಯಲ್ಲಿ ಅಡುಗೆ ಮಾಡಲು ಸಾಧ್ಯವಾಗದಂತಹ ಪರಿಸ್ಥಿತಿ ಇದೆ. ರೊಟ್ಟಿಯನ್ನು ತಂದೂರ್‌ನಿಂದ ಮಾಡಿಸಿಕೊಳ್ಳಬಹುದು, ಆದರೆ ಪದಾರ್ಥ

ಮಾಡುವುದು ಕಷ್ಟ.' ಲಂಗರ್‌ನಿಂದ ಊಟದ ವ್ಯವಸ್ಥೆ ಮಾಡುವಂತೆ ವಿನಂತಿ. ಹಾಗೆ ಹಝ್ರತ್ ಮಸೀಹ್ ಮೌಊದ್[ಅ] ಲಂಗರ್‌ನ ಇನ್‌ಚಾರ್ಜಿಗೆ ಹೀಗೆ ಆದೇಶ ನೀಡಿದರು: 'ಮುಫ್ತಿ ಸಾಹಿಬ್‌ರಿಗೆ ಲಂಗರ್‌ನಿಂದ ಎರಡು ಹೊತ್ತು ಉತ್ತಮ ಪದಾರ್ಥವನ್ನು ನೀಡಿರಿ.'

ಒಮ್ಮೆ ಸಂಶೋಧನೆಗಾಗಿ ಟರ್ಕಿ ಮತ್ತು ಸಿರಿಯಾದ ಗಡಿಪ್ರದೇಶಕ್ಕೆ ಒಂದು ನಿಯೋಗವನ್ನು ಕಳುಹಿಸಲು ನಿರ್ಧರಿಸಲಾಯಿತು. ನಿಯೋಗದ ಸದಸ್ಯರಿಗೆ ಸಿದ್ಧತೆಗಾಗಿ ಹಝ್ರತ್ ಮಸೀಹ್ ಮೌಊದ್[ಅ] ತಲಾ ಐವತ್ತು ರೂಪಾಯಿಗಳನ್ನು ನೀಡಿದರು. ಕೆಲವು ಕಾರಣಗಳಿಂದ ಆ ನಿಯೋಗಕ್ಕೆ ಹೋಗಲಾಗಲಿಲ್ಲ. ನಿಯೋಗದ ಓರ್ವ ಸದಸ್ಯ ಆ ಐವತ್ತು ರೂಪಾಯಿಗಳನ್ನು ಮರಳಿ ನೀಡಲು ಮುಂದಾದಾಗ ಹಝ್ರತ್ ಮಸೀಹ್ ಮೌಊದ್[ಅ] ಹೇಳಿದರು: 'ನಾವು ಯಾರಿಗಾದರೂ ಏನಾದರೂ ನೀಡಿದರೆ, ಅದನ್ನು ನಾವು ಮರಳಿ ಪಡೆಯುವುದಿಲ್ಲ.'

ಒಮ್ಮೆ ಲಂಗರ್‌ಗಾಗಿ ಖರ್ಚು ಮುಗಿದುಹೋದಾಗ ಹಝ್ರತ್ ಮಸೀಹ್ ಮೌಊದ್[ಅ] ಹೇಳಿದರು: 'ಪತ್ನಿಯಿಂದ ಯಾವುದಾದರೂ ಆಭರಣವನ್ನು ತೆಗೆದುಕೊಂಡು, ಅದನ್ನು ಮಾರಿ ಸಾಮಾನುಗಳನ್ನು ತಂದುಕೊಳ್ಳಿ.' ಎರಡು ದಿನಗಳ ನಂತರ ಮತ್ತೆ ಖರ್ಚು ಮುಗಿದುಹೋದಾಗ ಹಝ್ರತ್ ಮಸೀಹ್ ಮೌಊದ್[ಅ] ಹೇಳಿದರು: 'ನಾವು ಬಾಹ್ಯ ಸಾಧನಗಳನ್ನು ಪರಿಗಣಿಸಿ ವ್ಯವಸ್ಥೆ ಮಾಡಿದ್ದೆವು, ಈಗ ನಮಗೆ ಅಗತ್ಯವಿಲ್ಲ. ಅತಿಥಿಗಳು ಯಾರದ್ದೋ ಅವನೇ (ಅಲ್ಲಾಹನೇ) ವ್ಯವಸ್ಥೆ ಮಾಡುವನು' ಎಂದು ಹೇಳಿದರು. ಅದರಂತೆ, ಮುಂಜಾನೆ ಎಂಟು-ಒಂಬತ್ತು ಗಂಟೆಗೆ ಪೋಸ್ಟ್‌ಮ್ಯಾನ್ ಬಂದಾಗ, ಅವನ ಕೈಯಲ್ಲಿ ವಿವಿಧ ಸ್ಥಳಗಳಿಂದ ಬಂದಿದ್ದ ನೂರು-ನೂರು, ಐವತ್ತು-ಐವತ್ತು ರೂಪಾಯಿಗಳ ಹತ್ತು-ಹದಿನೈದು ಮನಿ ಆರ್ಡರ್‌ಗಳಿದ್ದವು. ಹಝ್ರತ್ ಮಸೀಹ್ ಮೌಊದ್[ಅ] ಆ ಮನಿ ಆರ್ಡರ್‌ಗಳನ್ನು ಸ್ವೀಕರಿಸಿ, ತವಕ್ಕುಲ್ (ಅಲ್ಲಾಹನ ಮೇಲೆ ಭರವಸೆ ಇರಿಸುವುದು) ಕುರಿತು ಭಾಷಣ ಮಾಡಿದರು.

ಒಮ್ಮೆ ತೀವ್ರ ಬರಗಾಲ ಎದುರಾದಾಗ ಹಝ್ರತ್ ಮಸೀಹ್ ಮೌಊದ್[ಅ] ಹೀಗೆ ಆದೇಶ ನೀಡಿದರು: 'ಲಂಗರ್‌ನಲ್ಲಿ ಯಾವಾಗಲೂ ರೊಟ್ಟಿ ತಯಾರಾಗಿರಲಿ. ರೊಟ್ಟಿ ಬೇಡುವವರಿಗೆ ರೊಟ್ಟಿ ನೀಡಬೇಕು ಮತ್ತು ಯಾರೂ ಬರಿಗೈಲಿ ಹೋಗಬಾರದು.'

ಶೇಖ್ ಹಾಮಿದ್ ಅಲಿ ಸಾಹಿಬ್[ರ] ವಿವರಿಸುತ್ತಾರೆ: 'ತಮ್ಮ ಕೊನೆಯ ಉಸಿರಿನ ವರೆಗೂ ಹಝ್ರತ್ ಮಸೀಹ್ ಮೌಊದ್[ಅ] ನನ್ನೊಡನೆ ಎಂದಿಗೂ ಲೆಕ್ಕ ಕೇಳಲಿಲ್ಲ ಮತ್ತು ಎಂದಿಗೂ ಕೋಪಗೊಳ್ಳಲಿಲ್ಲ.'

ಹಝ್ರತ್ ಶೇಖ್ ಅಹ್ಮದ್ ದೀನ್ ಸಾಹಿಬ್[ರ]ರನ್ನು ಒಮ್ಮೆ ಹಝ್ರತ್ ಮಸೀಹ್ ಮೌಊದ್[ಅ] ಯಾವುದೋ ಕೆಲಸಕ್ಕಾಗಿ ಕಳುಹಿಸಿದರು ಮತ್ತು 'ಮರುದಿನ ಬೇಗ ಬನ್ನಿ' ಎಂದು ಸೂಚಿಸಿದರು. ಅವರು ವಿವರಿಸುತ್ತಾರೆ: 'ನಾನು ಮರುದಿನ ತಲಪಲು ತಡವಾದಾಗ ಹಝ್ರತ್ ಮಸೀಹ್ ಮೌಊದ್[ಅ] ನನ್ನ ಚಿಂತೆಯಲ್ಲಿ ಒಬ್ಬ ವ್ಯಕ್ತಿಯನ್ನು ಕಳುಹಿಸಿದ್ದರು. ನಾನು ಹಝ್ರತ್ ಮಸೀಹ್ ಮೌಊದ್[ಅ]ರ ಸನ್ನಿಧಿಯಲ್ಲಿ ಹಾಜರಾದಾಗ, ಹಝ್ರತ್ ಮಸೀಹ್ ಮೌಊದ್[ಅ] ಮೊದಲು 'ನಿಮಗೇನಾದರೂ ತೊಂದರೆಯಾಯಿತೇ?' ಎಂದು ಕೇಳಿದರು. ಹಝ್ರತ್ ಮಸೀಹ್ ಮೌಊದ್[ಅ] ನನ್ನ ಕ್ಷೇಮ ಸಮಾಚಾರ ವಿಚಾರಿಸಿದ್ದನ್ನು ಕಂಡು ನನ್ನ ಹೃದಯ ಅರಳಿತು. ನಾನು ಲೆಕ್ಕ ನೀಡಲು ಮುಂದಾದಾಗ ಹಝ್ರತ್ ಮಸೀಹ್ ಮೌಊದ್[ಅ] ಹೇಳಿದರು: 'ನಮ್ಮ ಮತ್ತು ನಿಮ್ಮ ನಡುವೆ ಯಾವ ಲೆಕ್ಕ? ಈ ಹಣವನ್ನು ನಿಮ್ಮ ಅಗತ್ಯಕ್ಕಾಗಿ ಖರ್ಚು ಮಾಡಿಕೊಳ್ಳಿ.'

ಹಝ್ರತ್ ಹಕೀಮ್ ಮೌಲ್ವಿ ನೂರುದ್ದೀನ್ ಸಾಹಿಬ್[ರ] ಒಮ್ಮೆ ಹಝ್ರತ್ ಮಸೀಹ್ ಮೌಊದ್[ಅ]ರಿಂದ ಸ್ವಲ್ಪ ಸಾಲ ಪಡೆದಿದ್ದರು. ಅವರು ಆ ಸಾಲದ ಹಣವನ್ನು ಮರಳಿ ಕಳುಹಿಸಿದಾಗ ಹಝ್ರತ್ ಮಸೀಹ್ ಮೌಊದ್[ಅ] ಅದನ್ನು ಇಷ್ಟಪಡಲಿಲ್ಲ ಮತ್ತು ಹೀಗೆ ಹೇಳಿದರು: 'ನೀವು ನಮ್ಮ ಹಣವನ್ನು ನಿಮ್ಮ ಹಣದಿಂದ ಬೇರೆ ಎಂದು ಭಾವಿಸುತ್ತೀರಿ.'

ಹಝ್ರತ್ ಶೇಖ್ ಯಾಅ್‌ಖೂಬ್ ಅಲಿ ಇರ್‌ಫಾನಿ ಸಾಹಿಬ್[ರ] ಬರೆಯುತ್ತಾರೆ: 'ಹಝ್ರತ್ ಮಸೀಹ್ ಮೌಊದ್[ಅ] ಪ್ರವಾದಿತ್ವದ ಘೋಷಣೆ ಮಾಡಿದಾಗಿನಿಂದ ಮತ್ತು 'ಅರಸರು ನಿನ್ನ ಬಟ್ಟೆಗಳಿಂದ ಅನುಗ್ರಹವನ್ನು ಹುಡುಕುವರು' ಎಂದು ಅಲ್ಲಾಹನು ಅವರಿಗೆ ಸುವಾರ್ತೆ ನೀಡಿದ್ದಾನೆ ಎಂದು ಜನರಿಗೆ ತಿಳಿದಾಗಿನಿಂದ, ಜನರು ಹಝ್ರತ್ ಮಸೀಹ್ ಮೌಊದ್[ಅ]ರಿಂದ ಬಟ್ಟೆಗಳನ್ನು ಕೇಳುತ್ತಿದ್ದರು ಮತ್ತು ಅವರು ಎಂದಿಗೂ ಯಾರೊಡನೆಯೂ ಇಲ್ಲವೆನ್ನುತ್ತಿರಲಿಲ್ಲ. ಕೆಲವೊಮ್ಮೆ ಎಂತಹ ಪರಿಸ್ಥಿತಿ ಉಂಟಾಗುತ್ತಿತ್ತೆಂದರೆ, ಹಝ್ರತ್ ಮಸೀಹ್ ಮೌಊದ್[ಅ]ರ ದೇಹದ ಮೇಲಿದ್ದ ಬಟ್ಟೆಗಳು ಮಾತ್ರ ಉಳಿಯುತ್ತಿದ್ದವು ಮತ್ತು ಉಳಿದೆಲ್ಲವನ್ನೂ ನೀಡಿಬಿಡುತ್ತಿದ್ದರು.'

ಒಮ್ಮೆ ಹಝ್ರತ್ ಮಸೀಹ್ ಮೌಊದ್[ಅ]ರ ಮನೆಯಲ್ಲಿ ಒಬ್ಬ ಬಡ ಮಹಿಳೆ ಸ್ವಲ್ಪ ಅಕ್ಕಿಯನ್ನು ಕದ್ದಳು. ಅವಳು ಕದಿಯುವುದನ್ನು ಜನರು ನೋಡಿದರು ಮತ್ತು ಗಲಾಟೆ ಶುರುವಾಯಿತು. ಹಝ್ರತ್ ಮಸೀಹ್ ಮೌಊದ್[ಅ] ಆ

ಸಮಯದಲ್ಲಿ ತಮ್ಮ ಕೋಣೆಯಲ್ಲಿ ಕೆಲಸ ಮಾಡುತ್ತಿದ್ದರು. ಗಲಾಟೆ ಕೇಳಿ ಹೊರಬಂದಾಗ, ಒಬ್ಬ ಬಡ, ಹರಕು–ಮುರುಕು ಬಟ್ಟೆ ಧರಿಸಿದ್ದ ಮಹಿಳೆ ನಿಂತಿದ್ದಳು ಮತ್ತು ಅವಳ ಕೈಯಲ್ಲಿ ಸ್ವಲ್ಪ ಅಕ್ಕಿಯಿದ್ದ ಗಂಟು ಇರುವುದನ್ನು ನೋಡಿದರು. ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಘಟನೆಯ ಅರಿವಾಯಿತು ಮತ್ತು ಆ ಬಡ ಮಹಿಳೆಯ ಸ್ಥಿತಿಯನ್ನು ನೋಡಿದಾಗ ಅವರ ಹೃದಯ ಕರಗಿತು. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: ‘ಈಕೆ ಹಸಿದ ಮತ್ತು ನಿರ್ಗತಿಕಳಂತೆ ಕಾಣುತ್ತಿದ್ದಾಳೆ. ಇವಳಿಗೆ ಇನ್ನೂ ಸ್ವಲ್ಪ ಅಕ್ಕಿ ನೀಡಿ ಕಳುಹಿಸಿಬಿಡಿ. ತಪ್ಪುಗಳನ್ನು ಕಡೆಗಣಿಸುವ ಅಲ್ಲಾಹನ ಗುಣವನ್ನು ಅಳವಡಿಸಿಕೊಳ್ಳಿ.’

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಈ ಘಟನೆಯನ್ನು ವಿವರಿಸಿ ಬರೆಯುತ್ತಾರೆ: ‘ಈ ಘಟನೆಯ ಕುರಿತು ಯಾವುದೇ ಆತುರಪಡುವ ವ್ಯಕ್ತಿಯು, ’ಇದು ಕಳ್ಳತನಕ್ಕೆ ಪ್ರೋತ್ಸಾಹ ನೀಡುವಂತಹ ಮಾತಾಗಿದೆ, ಅಥವಾ ಒಬ್ಬ ಕಳ್ಳಿಗೆ ನೀವು ಧೈರ್ಯ ತುಂಬುತ್ತಿದ್ದೀರಿ’ ಎಂದು ಹೇಳಬಹುದು. ಆದರೆ ಆ ಸಂಪತ್ತು ಹಝ್ರತ್ ಮಸೀಹ್ ಮೌಊದ್(ಅ)ರದ್ದೇ ಆಗಿರುವಾಗ ಮತ್ತು ತೆಗೆದುಕೊಳ್ಳುವ ಮಹಿಳೆ ಹಸಿದ, ಹಸಿವಿನಿಂದ ಸಾಯುತ್ತಿದ್ದ ನಿರ್ಗತಿಕಳಾಗಿರುವಾಗ, ಇದು ಕಳ್ಳತನಕ್ಕೆ ಬೆಂಬಲ ನೀಡುವುದಲ್ಲ, ಬದಲಾಗಿ ವಾಸ್ತವದಲ್ಲಿ ಬಡವರಿಗೆ ಊಟ ನೀಡುವ ಗುಣಕ್ಕೆ ಸೇರಿದ ಸಂಗತಿಯಾಗಿದೆ ಎಂದು ಬುದ್ಧಿವಂತರು ಅರ್ಥಮಾಡಿಕೊಳ್ಳುವರು. ಹಝ್ರತ್ ಪೈಗಂಬರ್(ಸ) ಕೂಡ ಇಂತಹ ಸಂದರ್ಭಗಳಲ್ಲಿ, ಕಳ್ಳತನ ಮಾಡುವವನು ಬಹಳ ಬಡವನಾಗಿದ್ದರೆ ಮತ್ತು ತೀವ್ರ ಹಸಿವಿನ ಸ್ಥಿತಿಯಲ್ಲಿ ಯಾವುದಾದರೂ ತಿನ್ನುವ ವಸ್ತುವನ್ನು ಎತ್ತಿಕೊಂಡರೆ, ಅವನನ್ನು ಕಳ್ಳನೆಂದು ಪರಿಗಣಿಸುತ್ತಿರಲಿಲ್ಲ, ಬದಲಾಗಿ ಕಡೆಗಣಿಸಿ ಮನ್ನಿಸುತ್ತಿದ್ದರು ಎಂದು ಹದೀಸ್‌ಗಳಿಂದ ತಿಳಿದುಬರುತ್ತದೆ. ಇದು ಹಝ್ರತ್ ಪೈಗಂಬರ್(ಸ)ರ ಪರಿಪೂರ್ಣ ಅನುಸರಣೆಯ ಮಾದರಿಗಳಾಗಿವೆ.’

**ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಅಬ್ದಿಕಲ್ ಮಸೀಹಿಲ್ ಮೌಊದ್ ವ ಬಾರಿಕ್ ವ ಸಲ್ಲಿಮ್.**

————————————*****————————————

اَلْحَمْدُ لِلّٰہِ نَحْمَدُہٗ وَنَسْتَعِيْنُہٗ وَنَسْتَغْفِرُہٗ وَنُؤْمِنُ بِہٖ وَنَتَوَکَّلُ عَلَيْہِ وَنَعُوْذُ بِاللّٰہِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّھْدِہِ اللّٰہُ فَلَا مُضِلَّ لَہٗ وَمَنْ يُّضْلِلْہُ
فَلَا ھَادِیَ لَہٗ ۔ وَنَشْھَدُ اَنْ لَّآ اِلٰہَ اِلَّا اللّٰہُ وَنَشْھَدُ اَنَّ مُحَمَّدًا عَبْدُہٗ وَرَسُوْلُہٗ
عِبَادَ اللّٰہِ رَحِمَکُمُ اللّٰہُ اِنَّ اللّٰہَ يَاْمُرُ بِالْعَدْلِ وَالْاِحْسَانِ وَاِيْتَاءِ ذِی الْقُرْبٰی
وَيَنْھٰی عَنِ الْفَحْشَآءِ وَالْمُنْکَرِ وَالْبَغْیِ يَعِظُکُمْ لَعَلَّکُمْ تَذَکَّرُوْنَ ۝ اُذْکُرُوا اللّٰہَ
يَذْکُرْکُمْ وَادْعُوْہُ يَسْتَجِبْ لَکُمْ وَلَذِکْرُ اللّٰہِ اَکْبَرُ۔


***Friday Sermon delivered by Hadrath Khaleefatul Masih Al Khamis*(atba)**

At, ***‘Masjid Mubarak’,*** *Islamabad, Tilford,* U.K. On 03-07-2026

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha’at Team for Nazarath Nashr-O-Isha’ath, Qadian

***Email*****:** *khutuba.kannada@gmail.com*

**You can find all the Sermons archived at**: www.alislam.org/friday-sermon